ಪ್ರಬಂಧದ ಅನುಬಂಧ
ಯುಗಾದಿಯ ಸಂಬಂಧ

# ಸುಧಾ

## ಯುಗಾದಿ ವಿಶೇಷಾಂಕ-2025



'ಸುಧಾ' ಓದುಗರಿಗೆ ಯುಗಾದಿಯಷ್ಟೇ ಮರಳಿ ಮರಳಿ ಬರುವುದಿಲ್ಲ; ಪ್ರಬಂಧ ಸ್ಪರ್ಧೆಯ ಸಂಭ್ರಮವೂ ಮರುಕಳಿಸುತ್ತದೆ. ನೆನಪುಗಳ ಝರಿ, ಭಾವೋತ್ಕರ್ಷ, ವಿಚಾರಗಳ ಗೊಂಚಲು – ಎಲ್ಲವನ್ನೂ ಭಾಷೆಯ ಬಂಧದೊಳಗೆ ಹಿಡಿದಿಡುವ ಇದು ಪ್ರಬಂಧ ಸಮಯ! 'ಸುಧಾ ಯುಗಾದಿ ಸಂಚಿಕೆ 2025' ಅತ್ಯುತ್ತಮ ಪ್ರಬಂಧಗಳ ನಿರೀಕ್ಷೆಯಲ್ಲಿದೆ, ಮುಕ್ತ ಮನಸ್ಸಿನಿಂದ ಹೊಸ ಪ್ರಬಂಧಗಳನ್ನು ಸ್ವಾಗತಿಸುತ್ತಿದೆ. ಪ್ರಬಂಧ ಪ್ರಕಾರದಲ್ಲಿ ಹೊಸ ಸಾಧ್ಯತೆ ಮತ್ತು ಪ್ರಯೋಗಗಳನ್ನು ಉತ್ತೇಜಿಸಲು ಈ ಸ್ಪರ್ಧೆ.

**ಒಂದನೇ ಬಹುಮಾನ**
**15000**

**ಎರಡನೇ ಬಹುಮಾನ**
**12000**

**ಮೂರನೇ ಬಹುಮಾನ**
**10000**

**ಕೊನೆಯ ದಿನಾಂಕ**
**ಫೆಬ್ರುವರಿ 10, 2025**

- ಪ್ರಬಂಧಗಳು 2000 ಶಬ್ದ ಮೀರದಿರಲಿ.
- ಪ್ರಬಂಧಕ್ಕೆ ನಿರ್ದಿಷ್ಟ ವಸ್ತುವಿನ ಕಟ್ಟುಪಾಡಿಲ್ಲ. ಯಾವ ವಿಷಯದ ಬಗ್ಗೆಯಾದರೂ ಪ್ರಬಂಧ ಬರೆಯಬಹುದು.
- ಸ್ಪರ್ಧೆಗೆ ಕಳುಹಿಸುವ ಪ್ರಬಂಧಗಳು ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಜಾಲತಾಣ, ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಪ್ರಕಟಗೊಂಡಿರಬಾರದು.
- ಬರಹದ ಜೊತೆಯಲ್ಲಿ ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ದೂರವಾಣಿ ಸಂಖ್ಯೆ ಬರೆಯಿರಿ. ಜೊತೆಗೆ ನಿಮ್ಮ ಫೋಟೊ ಕೂಡ ಇರಲಿ.
- ಲಕೋಟೆ ಮೇಲೆ ಅಥವಾ ಇಮೇಲ್‌ನಲ್ಲಿ 'ಯುಗಾದಿ ಪ್ರಬಂಧ ಸ್ಪರ್ಧೆಗೆ' ಎಂದು ನಮೂದಿಸಿ.
- ಬಹುಮಾನಿತ ರಚನೆಗಳನ್ನು ಯಾವಾಗ ಬೇಕಾದರೂ ಯಾವ ಸ್ವರೂಪದಲ್ಲಾದರೂ ಬಳಸುವ ಹಕ್ಕನ್ನು 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಕಾದಿರಿಸಿಕೊಂಡಿದೆ.
- 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಸಿಬ್ಬಂದಿ ಮತ್ತು ಅವರ ಕುಟುಂಬ ವರ್ಗದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.
- ನುಡಿ–ಯುನಿಕೋಡ್‌ನಲ್ಲಿ ಪ್ರಬಂಧಗಳನ್ನು ಇ–ಮೇಲ್ ಮಾಡಬಹುದು.

# ಓದುಗರ ವೇದಿಕೆ

ಪ್ರಿಯ ಓದುಗರ ಸಹಭಾಗಿತ್ವ ಇಲ್ಲದೆ 'ಯುಗಾದಿ ಸಂಚಿಕೆ' ಕಳೆಗಟ್ಟುವುದು ಹೇಗೆ? ಇದೋ ಇಲ್ಲಿದೆ, ಓದುಗರ ಅಭಿವ್ಯಕ್ತಿಗೊಂದು ಆಹ್ವಾನ.

### ವಧು-ವರಾನ್ವೇಷಣೆ: ಅನುಭವ ಸ್ವಾರಸ್ಯ

ವಧು ಅಥವಾ ವರನ ಹುಡುಕಾಟ ಪ್ರತಿಯೊಬ್ಬರ ಜೀವನದಲ್ಲೂ ಸಂಭವಿಸುವಂತಹದ್ದು. ಸಂಗಾತಿಯ ಹುಡುಕಾಟದ ಸಂದರ್ಭ ಮಧುರ ಕ್ಷಣಗಳಿಗೆ, ಸ್ವಾರಸ್ಯಕ್ಕೆ ಇಲ್ಲವೇ ಮುಜುಗರಕ್ಕೆ ಕಾರಣವಾಗಿರಬಹುದು. ಬೆಲ್ಲ–ಬೇವಿನಂತಹ ವಿಶೇಷ ಕ್ಷಣಗಳನ್ನು 'ಸುಧಾ' ಓದುಗ ಬಳಗದೊಂದಿಗೆ ಪುಟ್ಟದಾಗಿ ಹಂಚಿಕೊಳ್ಳಬಹುದು. ಸಾಂಪ್ರದಾಯಿಕ ಹುಡುಗ–ಹುಡುಗಿ ಭೇಟಿ ಮಾತ್ರವಲ್ಲ, ಆನ್‌ಲೈನ್‌ನ 'ಮ್ಯಾಟ್ರಿಮೊನಿ' ಹುಡುಕಾಟ ತಡಕಾಟದ ಅನುಭವಗಳಿಗೂ ಅವಕಾಶವಿದೆ.

### ಆನ್‌ಲೈನ್ ವಂಚನೆಯ ವಿಶ್ವರೂಪ

ಮೊಬೈಲ್ ಹೊಂದಿದ ಮೇಲೆ ವಂಚನೆಗೆ ಒಳಗಾಗದಿರಲು ಸಾಧ್ಯವೆ? ದೊಡ್ಡದೋ ಸಣ್ಣದೋ ಪ್ರತಿಯೊಬ್ಬರೂ ಒಂದಲ್ಲಾ ಒಂದು ಸಂದರ್ಭದಲ್ಲಿ ವಂಚನೆಗೆ ಒಳಗಾಗಿಯೇ ಇರುತ್ತಾರೆ; ಕೆಲವರು ವಂಚನೆಯ ಹೊಸ್ತಿಲವರೆಗೂ ಹೋಗಿ ಕೂದಲೆಳೆಯಿಂದ ಪಾರಾಗಿರುತ್ತಾರೆ. ಹೀಗೆ ವಂಚನೆಗೊಳಗಾದ ಇಲ್ಲವೇ ವಂಚನೆಯಿಂದ ಪಾರಾದ ಪ್ರಸಂಗಗಳನ್ನು ಪುಟ್ಟದಾಗಿ ಬರೆದು ನಮಗೆ ಕಳಿಸಿ. ನಿಮ್ಮ ಅನುಭವಗಳು ಇತರರಿಗೆ ಪಾಠವಾಗಲೂಬಹುದು.

ಮೇಲಿನ ವಿಷಯಗಳಲ್ಲಿ ಯಾವುದರ ಬಗ್ಗೆಯಾದರೂ ಬರೆಯಬಹುದು. ಬರಹಗಳು 250 ಶಬ್ದಗಳ ಮಿತಿಯಲ್ಲಿರಲಿ. ಬರಹದೊಂದಿಗೆ ನಿಮ್ಮ ಭಾವಚಿತ್ರವೂ ಇರಲಿ. ಯುನಿಕೋಡ್, ಬರಹ ತಂತ್ರಾಂಶದಲ್ಲಿ ಬರಹಗಳನ್ನು ಇ-ಮೇಲ್ ಮಾಡಬಹುದು.

ಸಂಪಾದಕರು,
ಸುಧಾ ಯುಗಾದಿ ವಿಶೇಷಾಂಕ
ನಂ. 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು 560001

ಇಮೇಲ್: **ugadi@sudha.co.in**

**ಕೊನೆಯ ದಿನಾಂಕ**
**ಫೆ.5, 2025**